ರಾಜ್ಯದಲ್ಲಿರುವ ಖಾಸಗೀ ವೈದ್ಯಕೀಯ ವಿದ್ಯಾಲಯಗಳು

೩೧೯೫. ಶ್ರೀ ವೀರಯ್ಯಸ್ವಾಮಿ (ಚಿಂಚೋಳಿ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಖಾಸಗಿ ವೈದ್ಯಕೀಯ ಕಾಲೇಜುಗಳ ಒಳಗೊಂಡು ಹಾಲಿ ಇಪತ್ತಿನವರೆಗೂ ಇರುವ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು ?

ಆ) ರಾಜ್ಯದ ಬೇರೆ ಬೇರೆ ಕಾಲೇಜುಗಳಲ್ಲಿ ೧೯೮೮-೮೯ನೇ ಸಾಲಿನಲ್ಲಿ ಎಂ ಬಿ ಬಿ ಎಸ್ ಮತ್ತು ಬೇರೆ ಸ್ನಾತಕೋತ್ತರ ಪದವಿ ಮತ್ತು ಡಿಪ್ಲೊಮೋಕ್ಕೆ ದೊರೆತ ಸ್ಥಾನಗಳ ಸಂಖ್ಯೆ ಎಷ್ಟು ? (ಕಾಲೇಜು ವಾರು ವಿವರಗಳನ್ನು ನೀಡುವುದು)

ಇ) ಮೇಲೆ ನಮೂದಿಸಿರುವ ಕೋರ್ಸಿಗೆ ೧೯೮೮-೮೯ನೇ ಸಾಲಿನಲ್ಲಿ ಪ್ರತಿ ಕಾಲೇಜಿಗೆ ಪ್ರವೇಶ ಕ್ಕಾಗಿ ಮಂಜೂರಾದ ಸ್ಥಾನಗಳ ಸಂಖ್ಯೆ ಎಷ್ಟು ?

ಈ) ಈ ವೈದ್ಯಕೀಯ ಕೋರ್ಸಿನ ಪ್ರವೇಶಕ್ಕೆ ಕೊನೆಯ ದಿನಾಂಕ ?

ಶ್ರೀ ಎಸ್. ಆರ್: ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ೧೮

ಆ) ಮತ್ತು ಇ) ಮಾಹಿತಿಯನ್ನು ಅನುಬಂಧ- 'ಎ' ನಲ್ಲಿ ನೋಡಬಹುದು.

ಈ) ೭ನೇ ಸೆಪ್ಟೆಂಬರ್ ೧೯೮೮.

ANENURE-A

Statement showing the Particulars of seats available for admission to Under Graduate and post Graduate Courses in Medical Colleges

Name of the College	Seats available for 1987-88			Seats available for 1988-89		
	Under Graduate	Post Graduate Degree	Diploma	Under Graduate	Post Graduate Degree	Diploma
1 2	3	4	5	6	7	8
Government Medical Colleges						
1 Mysore Medical College, Mysore	135	88	75	135	83	80
2 Bangalore Medical College Bangalore	155	128	118	155	128	110
3 Karnataka Medical College Hubli	130	49	64	130	47	50
4 Bellary Medical College, Bellary	130	31	34	130	39	30
Private Medical Colleges.						
5 K. M. C. Manipal Section	220	27	19	220	27	19
K.M.C. Mangalore Section	200	33	41	200	33	41
6 St. John s Medical College Bangalore	60	7	12	60	10	14
7 J. N. Medical College, Belgaum	175	13	18	155	14	18
8 M. R. Medical College, Gulbarga	180	26	34	150	26	34
9 J. J. M. Medical College, Davangere	240	13	14	240	13	14

10	M. S. Ramaiah Medical College, Bangalore	162	–	–	100	–	–
11	Kemegowda Institute of Medical Science, Bangalore	153	–	–	50	–	–
12	Dr. B.R.Ambedkar Medical College, Bangalore	165	–	–	50	–	–
13	Al Ameen Medical College Bijapur	120	–	–	120	–	–
14	J, S. S. Medical College, Mysore	1 7	–	–	150	–	–
15	Adichunchangiri Medical College, Bellary	170	–	–	150	–	–
16	B. L. D. E. Medical College, Bijapur	130	–	–	130	–	–
17	Devaraj Urs Medical College Tamaka, Kolar	150	–	–	130	–	–
18	Siddartha Medical College Tumkur	–	–	–	150	–	–

ಶ್ರೀ ವೀರಯ್ಯ ಸ್ವಾಮಿ.—ಅಧ್ಯಕ್ಷರೇ, ಈ ಪ್ರಶ್ನೆ ಆರೋಗ್ಯ ಇಲಾಖೆಗೆ ಸಂಬಂಧಿಸಿದ್ದು. ಆದರೆ ಸಮಾಜ ಕಲ್ಯಾಣ ಮಂತ್ರಿಗಳು ಏತಕ್ಕೆ ಉತ್ತರ ಕೊಡುತ್ತಿದ್ದಾರೋ ಗೊತ್ತಿಲ್ಲ. ಕಾಲೇಜುಗಳ ಪ್ರವೇಶ ಸಂಖ್ಯೆಗೆ ಸಂಬಂಧಿಸಿದಂತೆ ಕೆಲವು ಕಾಲೇಜುಗಳ ಮೇಟ್ಟಿಗೆ ಕೊಟ್ಟಿರತಕ್ಕ ಉತ್ತರ ಸತ್ಯಕ್ಕೆ ದೂರವಾದುದು ಇದೆ. ಕೆಲವು ಕಾಲೇಜುಗಳಲ್ಲಿ ಕಡಿಮೆ ಸಂಖ್ಯೆ ತೋರಿಸಿದ್ದಾರೆ. ಕೆಲವು ಕಾಲೇಜುಗಳ ಅಡ್ಮಿಷನ್ಸ್‌ನಲ್ಲಿ ಪೋಸ್ಟ್ ಗ್ರಾಜುಯೇಟ್ ಕೋರ್ಸ್ ಮತ್ತು ಡಿಪ್ಲೊಮ ಕೋರ್ಸ್‌ಗಳಿಗೆ ಸೀಟುಗಳನ್ನು ಹೆಚ್ಚು ಮಾಡಿದ್ದಾರೆ. ಕೆಲವು ಕಾಲೇಜುಗಳಲ್ಲಿ ಎಂ.ಬಿ.ಬಿ.ಎಸ್. ಮತ್ತು ಪೋಸ್ಟ್ ಗ್ರಾಜುಯೇಟ್ ಕೋರ್ಸ್‌ಗಳಿಗೆ ಅಡ್ಮಿಷನ್ಸ್ ಸಂಖ್ಯೆಯನ್ನು ಕಡಿಮೆ ಮಾಡಿದ್ದಾರೆ ಈ ವರ್ಷ. ಇದಕ್ಕೆ ಏನು ಕಾರಣ? ಯಾವ ನಾರ್ಮ್ಸ್ ಇಟ್ಟುಕೊಂಡು ಈ ರೀತಿ ಹೆಚ್ಚು ಕಡಿಮೆ ಮಾಡಿದ್ದಾರೆ? ಸೀಟುಗಳ ಸಂಖ್ಯೆಯನ್ನು ಹೆಚ್ಚು ಮಾಡಿದ್ದರೆ ಆ ಕಾಲೇಜಿನವರು ಎಲ್ಲಾ ನಿಯಮಗಳನ್ನು ಫುಲ್‌ಫಿಲ್ ಮಾಡಿದ್ದಾರೆ ಎಂಬ ಕಾರಣ ಇದೆಯೇ ಅಥವಾ ಕಡಿಮೆ ಮಾಡಿದ್ದರೆ ನಿಯಮಗಳನ್ನು ಫುಲ್‌ಫಿಲ್ ಮಾಡುವುದರಲ್ಲಿ ಫೇಲಾಗಿದ್ದಾರೆ ಎಂಬ ಕಾರಣವೇ ಎಂಬುದನ್ನು ತಿಳಿಸಬೇಕು. ಕೊನೆಯ ತಾರೀಖು ಏನೇ ಸೆಪ್ಟೆಂಬರ್ ೧೫ರಲ್ಲಿ ಎಂದು ತಿಳಿಸಿದ್ದಾರೆ. ಆದರೆ ಏನೇ ಸೆಪ್ಟೆಂಬರ್ ಆದನಂತರವೂ ಅದೇ ಡೇಟ್‌ನಲ್ಲಿ ಅಡ್ಮಿಷನ್ಸ್ ಮಾಡುತ್ತಿದ್ದಾರೆ.

ಶ್ರೀ ಪಿ. ಜಿ ಆರ್. ಸಿಂಧ್ಯ (ಮಾನ್ಯ ಮುಖ್ಯ ಮಂತ್ರಿಗಳ ಪರವಾಗಿ).—ಮಾನ್ಯ ಅಧ್ಯಕ್ಷರೇ, ಈ ಬಂದು ಅನುಬಂಧದಲ್ಲಿ ಏನೂ ಅಂಕಿ ಸಂಖ್ಯೆಗಳು ಕೊಟ್ಟಿದೆ ಅದು ಸರಿಯಾಗಿದೆ. ಇದರಲ್ಲಿ ಯಾವುದೇ ರೀತಿಯಲ್ಲಿಯೂ ಈ ಸದನವನ್ನು ತಪ್ಪುದಾರಿಗೆ ಎಳೆಯುವಂಥ ಪ್ರಯತ್ನ ಮಾಡಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಈ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಗಳಿಗೆ ತಾವೇ ಉತ್ತರ ಕೊಡಬೇಕೆಂದು ಸೂಚಿಸಿರುವುದರಿಂದ ನಾನು ಉತ್ತರ ಕೊಟ್ಟಿದ್ದೇನೆ. ಕೆಲವು ಕಾಲೇಜುಗಳಲ್ಲಿ ಪ್ರವೇಶಕ್ಕೆ ಸಂಬಂಧಪಟ್ಟಂತೆ ಸಂಖ್ಯೆಗಳನ್ನು ಕಡಿಮೆ ಮಾಡಿರುವುದಕ್ಕೆ ಕಾರಣ ಇದೆ. ಬೆಂಗಳೂರು ನಗರದಲ್ಲಿರುವ ಮೂರು ಖಾಸಗೀ ಮೆಡಿಕಲ್ ಕಾಲೇಜುಗಳಲ್ಲಿ ಅಂದರೆ, ಡಾ॥ ಅಂಬೇಡ್ಕರ್ ಕಾಲೇಜು, ರಾಮಯ್ಯ

ಕಾಲೇಜು, ಕೆಂಪೇಗೌಡ ಕಾಲೇಜುಗಳಲ್ಲಿ ತಾತ್ಕಾಲಿಕವಾಗಿ ಇಂಡಿಯನ್ ಮೆಡಿಕಲ್ ಕೌನ್ಸಿಲ್‌ನವರಿಗೆ ರೆಕಮೆಂಡ್ ಮಾಡಿದ್ದು ಅಂಬೇಡ್ಕರ್ ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟಂತೆ ೫೦ಕ್ಕೆ ಫಿಕ್ಸ್ ಮಾಡಿದ್ದಾರೆ. ರಾಮಯ್ಯ ಮೆಡಿಕಲ್ ಕಾಲೇಜಿಗೆ ಸಂಬಂಧಪಟ್ಟಂತೆ ೧೦೦ಕ್ಕೆ ಫಿಕ್ಸ್ ಮಾಡಿದ್ದಾರೆ.

ಶ್ರೀ ಕೆ. ಹೆಚ್. ಪಾಟೀಲ್.—ಈ ರೀತಿ ವಿತಕೋಸ್ಕರ ಮಾಡಿದರು ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ನಾನು ಉತ್ತರ ಹೇಳಿದಮೇಲೆ ಅವರು ಕ್ಲಾರಿಫಿಕೇಷನ್ ಕೇಳಲಿ. ಇಂಟೇಕ್ ಫಿಕ್ಸ್ ಮಾಡುವವರು ಐ.ಎಂ.ಸಿ. ಅವರು. ಅದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅಂಬೇಡ್ಕರ್ ಮತ್ತು ಕೆಂಪೇಗೌಡ ಮೆಡಿಕಲ್ ಕಾಲೇಜುಗಳಲ್ಲಿ ೫೦ ಮಕ್ಕಳಿಗೆ ಫಿಕ್ಸ್ ಮಾಡಿದ್ದಾರೆ. ಇದರಿಂದ ಇಡೀ ರಾಜ್ಯದಲ್ಲಿ ಕಳೆದ ವರ್ಷಕ್ಕಿಂತ ೨೦೦ ಸೀಟು ಕಡಿಮೆ ಆಯಿತು. ಪಿ.ಜಿ. ಕೋರ್ಸಿಗೆ ಸಂಬಂಧಪಟ್ಟಂತೆ ಯಾವರೀತಿಯಲ್ಲೂ ಸೀಟುಗಳು ಕಡಿಮೆಯಾಗಿಲ್ಲ. ಅಲಾಟ್‌ಮೆಂಟ್ ಮಾಡುವಾಗ ಇನ್ ಸರ್ವಿಸ್ ಕ್ಯಾಂಡಿಡೇಟ್ಸ್‌ಗೆ ಮತ್ತು ಎಂಟ್ರೆನ್ಸ್ ಎಕ್ಸಾಮಿನೇಷನ್‌ನಲ್ಲಿ ಪಾಸಾದೆವರಿಗೆ ನಿಗದಿ ಮಾಡುವಾಗ ಒಂದೆರಡು ಸೀಟುಗಳು ಹೆಚ್ಚುಕಡಿಮೆ ಆಗಿರಬಹುದು. ಅಡ್ಮಿಷನ್ ವಿಚಾರದಲ್ಲಿ ಸೆಪ್ಟೆಂಬರ್ ೭ ಕೊನೆ ದಿನವಾದರೂ ಸಮಯಾವಕಾಶ ಕೊಟ್ಟಿದ್ದಾರೆ. ಇದು ಯೂನಿವರ್ಸಿಟಿಗೆ ಸಂಬಂಧಪಟ್ಟ ವಿಚಾರ.

ರೈತರ ದಾಖಲೆಗಳನ್ನೊಳಗೊಂಡ ಪಾಸ್ ಬುಕ್ ಕೊಡುವ ಬಗ್ಗೆ

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಮುಖ್ಯ ಮಂತ್ರಿಗಳೇ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಜನತಾ ಪಕ್ಷದ ಚುನಾವಣಾ ಪ್ರಣಾಳಿಕೆ ಪ್ರಕಾರ ರೈತನಿಗೆ ಅವನ ದಾಖಲೆ ಪಾಸ್ ಬುಕ್ ಕೊಡುವ ವಿಚಾರ ಇದುವರೆವಿಗೂ ಕಾರ್ಯರೂಪಕ್ಕೆ ಬಾರದಿರಲು ಕಾರಣವೇನು.

ಆ) ಇದನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ?

ಶ್ರೀ ಎಸ್. ಆರ್. ಬೊಮ್ಮಾಯಿ (ಮುಖ್ಯ ಮಂತ್ರಿಗಳು).—

ಅ) ರೈತರ ಭೂಮಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳ ಕ್ರೋಢೀಕೃತ ಕೃಷಿ ಸಾಲ ಪಾಸ್ ಪುಸ್ತಕಗಳನ್ನು ಜಿಲ್ಲಾ ಕೋಡ್ ಸಂಖ್ಯೆ ಹಾಗೂ ಹಸಿರು ಬಣ್ಣದ ರೆಕ್ಜಿನ್ ಹೊದಿಕೆಯೊಂದಿಗೆ ವಿತರಿಸಲು ತೀರ್ಮಾನಿಸಿದೆ. ಈ ಬಗ್ಗೆ ರೆಕ್ಜಿನ್ ಕೊಂಡುಕೊಳ್ಳಲು ತೀರ್ಮಾನವಾಲ್ಲದೇ ಇರುವುದರಿಂದ ತಡವಾಗಿದೆ.

ಆ) ಅತಿ ಶೀಘ್ರವಾಗಿ ವಿತರಿಸಲಾಗುವುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ಇದು ಲಕ್ಷಾಂತರ ರೈತರಿಗೆ ಸಂಬಂಧಪಟ್ಟ ವಿಚಾರ ಪಾಸ್ ಪುಸ್ತಕಗಳ ಬಗ್ಗೆ ಜನತಾ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಸ್ಪಷ್ಟವಾಗಿ ಹೇಳಿದೆ. ಆದರೆ, ಇವತ್ತೂ ಹಸಿರು ಬಣ್ಣದ ರೆಕ್ಜೆಲನ್ ಹೊದಿಕೆಯನ್ನು ಕೊಂಡುಕೊಳ್ಳುವುದರ ಬಗೆ ತೀರ್ಮಾನ ಮಾಡಬೇಕಾಗಿದೆ, ಅದು ತೀರ್ಮಾನವಾಗಿಲ್ಲದೇ ಇರುವುದರಿಂದ ತಡವಾಗಿದೆಯೆಂದು ಹೇಳಿದ್ದಾರೆ ಹಸಿರು ಬಣ್ಣದ ರೆಕ್ಜಿಲನ್ ಇಲ್ಲದೇ ಇದ್ದರೆ, ವೈಟ್ ರ್ಯಾಪರ್ ಹಾಕಿ ಕೊಡಿ. ಇವತ್ತು ರೈತರಿಗೆ ಬೇಕಾದ ಪಿ-೬ ದಾಖಲೆಗಳನ್ನು ಇದರಲ್ಲಿ ನಮೂದಿಸಬೇಕಾಗಿರುವುದರಿಂದ ಇದರ ಅವಶ್ಯಕತೆ ಬಹಳ ಇದೆ. ಸದನ ಮುಂಗಿಯುವುದರೊಳಗೆ ವಿತರಣೆ ಮಾಡುತ್ತೀರಾ ?

ಶ್ರೀ ಎ. ಲಕ್ಷ್ಮೀಸಾಗರ್.—ಈ ಸರ್ಕಾರದ ಅವಧಿ ಮುಂಗಿಯುವುದರೊಳಗೆ ಇದನ್ನು ಮಾಡುತ್ತೇವೆ.

ಶ್ರೀ ಎಸ್ ಆರ್. ಬೊಮ್ಮಾಯಿ.—ಈಗಾಗಲೇ ಇದನ್ನು ಪ್ರಾರಂಭ ಮಾಡಿದ್ದೇವೆ. ಪುಸ್ತಕಗಳನ್ನು ಪ್ರಿಂಟ್ ಮಾಡಿಸುವುದೇ ಒಂದೇ ಅಲ್ಲ. ಇದರಲ್ಲಿ ಬಹು ಮುಖ್ಯವಾದ ವಿಚಾರಗಳನ್ನು ಬರೆಯಬೇಕಾಗಿದೆ. ಕೆಲವು ಕಡೆ ಹಂಚಿದ್ದೇವೆ. ಈ ವರ್ಷದ ಗುರಿ ಏನು ಇದೆ ಅದರಂತೆ ಹಂಚುತ್ತೇವೆ.